ನೋಂದಾಯಿತ ಅಂಚೆಯಲ್ಲಿ

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

Government of Karnataka
Forest Department

ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೊಡಗು ವೃತ್ತ, ಮಡಿಕೇರಿ-571201, ಕೊಡಗುಜಿಲ್ಲೆ
OFFICE OF THE CONSERVATOR OF FORESTS, KODAGU CIRCLE, MADIKERI-571201, KODAGU DISTRICT
Email:ccfkodagu@gmail.com
ದೂರವಾಣಿ/Phone:08272-225708

---

ಸಂಖ್ಯೆ :ಸಂಖ್ಯೆ: ಭೂಮಿ/ರಸ್ತೆ/ಜಿಎಲ್-988/2019-2020 ದಿನಾಂಕ : 20.12.2021

**ಇವರಿಗೆ,**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ಅರಣ್ಯ ಸಂರಕ್ಷಣೆ)
ಅರಣ್ಯ ಭವನ
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-03.

ಮಾನ್ಯರೇ,

**ವಿಷಯ:** ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು, ವಿರಾಜಪೇಟೆ ಅರಣ್ಯ ವಿಭಾಗ ಯವಕಪಾಡಿ ಗ್ರಾಮದ ಸರ್ವೆ ನಂ 43 ರಲ್ಲಿ 0.84 ಅರಣ್ಯ ಪ್ರದೇಶವನ್ನು ಸಂಪರ್ಕ ರಸ್ತೆಗಾಗಿ ಶ್ರೀ ಬಿ.ಯು.ಪೂವಣ್ಣ, ಕುಂಜಿಲ ಗ್ರಾಮ, ಕಕ್ಕಬೆ ಅಂಚೆ, ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ ಇವರಿಗೆ ಗೇಣಿಗೆ ನೀಡುವ ಕುರಿತು.

**ಉಲ್ಲೇಖ:**
1. ತಮ್ಮ ಕಚೇರಿ ಪತ್ರ ಸಂಖ್ಯೆ : KFD/HOFF/A5-6(GFL)/17/2019 FC, dated : 04.02.2021.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ಪ್ರಾದೇಶಿಕ ವಿಭಾಗ, ವಿರಾಜಪೇಟೆ ಇವರ ಪತ್ರ ಸಂಖ್ಯೆ : ಉಅಸಂ/ವಿಪೇಟೆ/ಎಲ್‌ಎನ್‌ಡಿ/ವಿವ-12/2021-22/2171, ದಿ: 28.10.2021 ಮತ್ತು 12.11.2021

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ತಮ್ಮ ಕಛೇರಿ ಪತ್ರದಲ್ಲಿ ಸೂಚಿಸಿರುವಂತೆ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು, ವಿರಾಜಪೇಟೆ ಅರಣ್ಯ ವಿಭಾಗ ಯವಕಪಾಡಿ ಗ್ರಾಮದ ಸರ್ವೆ ನಂ 43 ರಲ್ಲಿ 0.84 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಶ್ರೀ ಬಿ.ಯು.ಪೂವಣ್ಣ, ಕುಂಜಿಲ ಗ್ರಾಮ, ಕಕ್ಕಬೆ ಅಂಚೆ, ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ ಇವರು ಯವಕಪಾಡಿ ಗ್ರಾಮದ ಸ.ನಂ 52ಎ, 52ಬಿ, 52ಸಿ ಯ ಒಟ್ಟು 41.55 ಎಕರೆ ಸ್ವಂತ ಜಾಗಕ್ಕೆ ಹೋಗುವ ಸಂಬಂಧ ಗೇಣಿಗೆ ನೀಡುವ ಕುರಿತು ಅನ್‌ಲೈನ್ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿರುವಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ಪ್ರಾದೇಶಿಕ ವಿಭಾಗ, ವಿರಾಜಪೇಟೆ ಇವರು ಸದರಿ ಪ್ರಸ್ತಾವನೆಯ ಕುರಿತು ಖುದ್ದಾಗಿ ಪರಿಶೀಲನೆ ನಡೆಸಿ ಉಲ್ಲೇಖ (2) ರಂತೆ ಈ ಕಚೇರಿಗೆ ವರದಿ ಸಲ್ಲಿಸಿರುತ್ತಾರೆ.

ಅದರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ಪ್ರಾದೇಶಿಕ ವಿಭಾಗ, ವಿರಾಜಪೇಟೆ ಇವರ ವರದಿಯಂತೆ ಶ್ರೀ ಬಿ.ಯು.ಪೂವಣ್ಣ, ಕುಂಜಿಲ ಗ್ರಾಮ, ಕಕ್ಕಬೆ ಅಂಚೆ, ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ ಇವರು ಯವಕಪಾಡಿ ಗ್ರಾಮದ ಸ.ನಂ 52ಎ, 52ಬಿ, 52ಸಿ ಯ ಒಟ್ಟು 41.55 ಎಕರೆ ಜಾಗಕ್ಕೆ ಹೋಗಲು ಹಳೆಯ ಕೂಪು ರಸ್ತೆಯನ್ನು ಬಳಸಿಕೊಂಡು ವಾಹನದ ಮೂಲಕ ಸಂಚರಿಸಲು ಅನುಮತಿ ಕೋರಿದ್ದು, ಸದರಿ ಪ್ರದೇಶವು ಪಡಿನಾಲ್ಕು ನಾಡು ಮೀಸಲು ಅರಣ್ಯದ ಎನ್‌ಕ್ಲೋಸರ್ ಪ್ರದೇಶವಾಗಿದ್ದು, ಸದರಿಯವರ ಕೋರಿದಂತೆ ಕೂಪು ರಸ್ತೆಯನ್ನು ಬಳಸಿ ವಾಹನದ ಸಂಚರಿಸಲು ಕಾನೂನಿನಲ್ಲಿ ಅವಕಾಶವಿಲ್ಲದೆ ಕಾರಣ ಅನುಮತಿ ನೀಡುವುದು ಕಷ್ಟ ಸಾಧ್ಯವಾಗಿರುತ್ತದೆ. ಅಲ್ಲದೆ

ಸದರಿಯವರು ಕೋರಿರುವ ರಸ್ತೆಯನ್ನು ಬಳಸಿ ವಾಹನ ಸಂಚಾರಕ್ಕೆ ಅನುಮತಿ ನೀಡಿದಲ್ಲಿ ವಿವಿಧ ಪ್ರಾಣಿ - ಪಕ್ಷಿಗಳ ಜೀವ ಸಂಕುಲಕ್ಕೂ ಪ್ರಾಣ ಹಾನಿಯಾಗುವ ಸಂಭವ ವಿರುತ್ತದೆ ಹಾಗೂ ಸದರಿ ಪ್ರದೇಶವು ಪಶ್ಚಿಮ ಘಟ್ಟದಲ್ಲಿದ್ದು, ಬಹಳಷ್ಟು ಜೀವ ಸಂಕುಲಗಳ ತಾಣವಾಗಿದ್ದು, ತೊರೆ-ನದಿ ಹುಟ್ಟುವ ಮೂಲ ಸ್ಥಾನವಾಗಿರುತ್ತದೆ. ಅಲ್ಲದೆ ಕೂಪು ರಸ್ತೆಯನ್ನು ಇಲಾಖಾ ರೀತಿಯಲ್ಲಿ ಅವಕಾಶ ಮಾಡಿಕೊಟ್ಟಲ್ಲಿ ಮಾಕುಟ್ಟ ವಲಯದಲ್ಲಿ ಒಟ್ಟು 23 ಎನ್‌ಕ್ಲೋಸರ್‌ಗಳಿದ್ದು ಇತರೆ ಎನ್‌ಕ್ಲೋಸರ್‌ಗಳ ಮಾಲೀಕರು ಸದರಿ ಜಾಗಕ್ಕೆ ತೆರಳಲು ವಾಹನ ಬಳಸಲು ರಸ್ತೆಗಾಗಿ ಅರ್ಜಿ ಸಲ್ಲಿಸುವ ಸಂಭವವಿರುತ್ತದೆ. ಪಡಿನಾಲ್ಕು ಮೀಸಲು ಅರಣ್ಯದ ವ್ಯಾಪ್ತಿಯಲ್ಲಿ ಒಟ್ಟು 70 ಎನ್‌ಕ್ಲೋಸರ್‌ಗಳಿದ್ದು 3175.86 ಹೆಕ್ಟರ್‌ಗಳಿರುತ್ತದೆ. ಸದರಿ ಜಾಗದ ಮಾಲೀಕರು ಮೀಸಲು ಅರಣ್ಯವನ್ನು ಖಾಸಗಿ ವಾಹನ ಸಂಚಾರಕ್ಕೆ ಬಳಸಿಕೊಳ್ಳಲು ಮನವಿ ಸಲ್ಲಿಸಿದ್ದಲ್ಲಿ ಮೀಸಲು ಅರಣ್ಯ ನಾಶವಾಗುವ ಸಂಭವವಿರುತ್ತದೆ. ಸದರಿ ಪ್ರದೇಶಕ್ಕೆ ತೆರಳಲು 3 ಅಡಿ ರಸ್ತೆಯನ್ನು ಕಾಲು ನಡಿಗೆಯಲ್ಲಿ ಉಪಯೋಗಿಸಲು ಯಾವುದೇ ಅಭ್ಯಂತರವಿರುವುದಿಲ್ಲ ಆದರೆ ಕೂಪು ರಸ್ತೆಯನ್ನು ವಾಹನ ಸಂಚಾರಕ್ಕೆ ಬಳಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ ಎಂದು ವರದಿಯನ್ನು ಸಲ್ಲಿಸಿರುತ್ತಾರೆ.

ಅದುದರಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ಪ್ರಾದೇಶಿಕ ವಿಭಾಗ, ವಿರಾಜಪೇಟೆ ಇವರ ಉಲ್ಲೇಖ (2) ರ ವರದಿಯಂತೆ ಶ್ರೀ ಬಿ.ಯು.ಪೂವಣ್ಣ, ಕುಂಜಿಲ ಗ್ರಾಮ, ಕಕ್ಕಬೆ ಅಂಚೆ, ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ ಇವರು ಯವಕಪಾಡಿ ಗ್ರಾಮದ ಸ.ನಂ 52ಎ, 52ಬಿ, 52ಸಿ ಯ ಒಟ್ಟು 41.55 ಎಕರೆ ಸ್ವಂತ ಜಾಗಕ್ಕೆ ತೆರಳಲು ಕೂಪು ರಸ್ತೆಯನ್ನು ವಾಹನ ಸಂಚಾರಕ್ಕೆ ಬಳಸುವುದು ಸೂಕ್ತವಲ್ಲವೆಂದು ಕಂಡುಬಂದಿರುವುದರಿಂದ ಅವರ ಮನವಿಯನ್ನು ಪರಿಗಣಿಸಬಾರದೆಂದು ಕೋರಿ ವರದಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ, ಮಡಿಕೇರಿ.